ದಿ: 25-03-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ.ಸಿ.ಎಸ್. ರವರಿಂದ

ನಾನು ಖಾಯಂ ಆಗಿ ಕಳೆದ ಸುಮಾರು 35 ವರ್ಷಗಳಿಂದ ನನ್ನ ಹೆಂಡತಿ ಮತ್ತು ಮಗನ ಜೊತೆ ಮಹಾರಾಷ್ಟ್ರದ ಪನವೆಲ್ ನಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆಯಾದ ಮಹಾಬಲ ಶೆಟ್ಟಿಯು ಸಹ ಮುಂಬೈಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಮತ್ತು ನನ್ನ ತಾಯಿ ಅವರ ಜೊತೆ ವಾಸಮಾಡುತ್ತಿದ್ದೆವು ಎಂದರೆ ಸರಿ. ಮುಂಬೈನಲ್ಲಿ ನನ್ನ ತಂದೆಗೆ ಸ್ವಂತ ಮನೆ ಇತು ಎಂದರೆ ಸರಿಯಲ್ಲ. ನಮ್ಮ ತಂದೆ ಸುಮಾರು 25 ವರ್ಷಗಳ ಹಿಂದೆ ಕಟಬೆಲ್ತೂರಿಗೆ ಬಂದಿರುತ್ತಾರೆ. ಕಟಬೆಲ್ತೂರಿನಲ್ಲಿ ನನ್ನ ತಂದೆ, ತಾಯಿ ಮತ್ತು ನನ್ನ ತಂಗಿಯಾದ 2 ನೇ ಪ್ರತಿವಾದಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಸುಮಾರು 7-8 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅವರ ಮರಣದ ದಿನಾಂಕ, ತಿಂಗಳು ಮತ್ತು ಇಸವಿ ಹೇಳಲು ಆಗುವುದಿಲ್ಲ. ನಮ್ಮ ತಂದೆ ಮರಣ ಹೊಂದಿದಾಗ ಅವರ ಅಂತ್ಯಕ್ರಿಯೆಗೆ ನಾನು ಬರಲು ಸಿದ್ಧನಾಗಿದ್ದಾಗ ನಾನು ಬರುವವರೆಗೆ ಕಾಯುವುದಿಲ್ಲ ಎಂದು ಹೇಳಿ ನನ್ನ ಅನುಪಸ್ಥಿತಿಯಲ್ಲಿ ಅವರ ಅಂತ್ಯಕ್ರಿಯೆಯನ್ನು ಮಾಡಿರುತ್ತಾರೆ. ನನ್ನ ತಂದೆಗೆ ಗಂಟಲಿನಲ್ಲಿ ಸಮಸ್ಯೆ ಇದ್ದುದ್ದರಿಂದ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ. ನನ್ನ ತಂದೆ ಮತ್ತು ತಾಯಿಯನ್ನು ನನ್ನ ತಂಗಿಯಾದ 2 ನೇ ಪ್ರತಿವಾದಿ ಮಾತ್ರ ನೋಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಕಟಬೆಲ್ತೂರಿಗೆ ಬಂದ ನಂತರ ನಾನು ಸಂಪೂರ್ಣವಾಗಿ ಅವರ ಸಂಪರ್ಕವನ್ನು ಕಡಿದುಕೊಂಡಿದ್ದೆ ಎಂದರೆ ಸರಿಯಲ್ಲ.

ದೇವಲ್ಕುಂದ ಗ್ರಾಮದಲ್ಲಿರುವ ಕ್ರಮಾಂಕ 15 ರಲ್ಲಿರುವ ಆಸ್ತಿಯು ನಮ್ಮ ತಂದೆ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನಮ್ಮ ತಂದೆಯು ಅವರ ಜೀವಿತ ಕಾಲದಲ್ಲಿ 15 ನೇ ದಾವಾ ಆಸ್ತಿಯನ್ನು ವ್ಯವಸ್ಥಾಪತ್ರದ ಮುಖಾಂತರ 2 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿ. 15 ನೇ ದಾವಾ ಆಸ್ತಿಯನ್ನು ಬಿಟ್ಟು ಉಳಿದ ಆಸ್ತಿಗಳಲ್ಲಿ 1/5 ಭಾಗದ ಹಿಸ್ಸೆಯನ್ನು ಕೇಳುತ್ತಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ಭದ್ರಕಾಳಿ ದೈವಸ್ಥಾನ ಮತ್ತು ಚಿತ್ತೇರಿ ದೇವಸ್ಥಾನಗಳು ಇವೆ ಎಂದರೆ ಸರಿ. ಸದರಿ ದೈವಸ್ಥಾನ ಮತ್ತು ದೇವಸ್ಥಾನಗಳಲ್ಲಿ ವಾರ್ಷಿಕ ಪೂಜೆ ಮತ್ತು ಪುನಸ್ಕಾರಗಳನ್ನು ನಮ್ಮ ಕುಟುಂಬದವರು ಮಾಡುತ್ತಾರೆ ಎಂದರೆ ಸರಿ. ಸದರಿ ಕಾರ್ಯಕ್ರಮಗಳಿಗೆ ತುಂಬಾ ಹಣ ಖರ್ಚಾಗುತ್ತದೆ ಎಂದರೆ ಸರಿ. ಸದರಿ ಕಾರ್ಯಕ್ರಮಗಳ ಖರ್ಚನ್ನು ಕುಟುಂಬದ ಆಸ್ತಿಗಳಲ್ಲಿ ಬಂದ ಆದಾಯಗಳಿಂದ ಭರಿಸುತ್ತಾರೆ ಎಂದರೆ ಸರಿ. ನನ್ನ ತಾಯಿಯಾದ 1 ನೇ ಪ್ರತಿವಾದಿಯು 1 ರಿಂದ 14 ನೇ ದಾವಾ ಆಸ್ತಿಗಳಲ್ಲಿ ಇರುವ ಹಕ್ಕನ್ನು 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ,

ಆದರೆ ಅದರಲ್ಲಿ ನನ್ನ ಹಕ್ಕು ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಖರ್ಚು ಮಾಡಿದ್ದೇನೆ ಎಂದು ಹೇಳುವ ಹಣದ ಬಗ್ಗೆ ದಾಖಲೆಗಳು ಇರುವುದಿಲ್ಲ.

ಈಗಲೂ ಸಹ ನನ್ನ ತಾಯಿಯಾದ 1 ನೇ ಪ್ರತಿವಾದಿಯ ಆರೈಕೆಯನ್ನು ನನ್ನ ತಂಗಿಯಾದ 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾಳೆ ಎಂದರೆ ಸರಿ. 15 ನೇ ದಾವಾ ಆಸ್ತಿಯಲ್ಲಿ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಂದಾಪುರ